# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಎಂವೈಎಸ್/1862/2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 21/02/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ ಸೈಯದ್ ಜಾಫರ್, ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬನ್ನೂರು ರಸ್ತೆ, ಮಂಡ್ಯ, ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಮಂಡ್ಯ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಸೈಯದ್ ಜಾಫರ್, ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬನ್ನೂರು ರಸ್ತೆ, ಮಂಡ್ಯ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಮಹದೇವ ಪ್ರಸಾದ್, ಬಿನ್ ಆರ್.ಎನ್.ಪರಶಿವಮೂರ್ತಿ, ರಾಗಿಬೊಮ್ಮನಹಳ್ಳಿ, ತಿರುಗಾವಲು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. ದೂರಿನಲ್ಲಿ ದೂರುದಾರರ ತಂದೆ ಶ್ರೀ ಆರ್.ಎನ್.ಪರಶಿವಮೂರ್ತಿ, ರಾಗಿಬೊಮ್ಮನಹಳ್ಳಿ ಗ್ರಾಮದಲ್ಲಿ, ಸರ್ವೇ ನಂ: 316/1ಎ4 ರಲ್ಲಿ 10–08 ಜಮೀನನ್ನು ಹೊಂದಿದ್ದು ಸದರಿ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿಸುವ ಬಗ್ಗೆ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಂಡ್ಯ ಇವರಿಗೆ ದಿನಾಂಕ: 29–12–2016 ರಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ಬಗ್ಗೆ ಎದುರುದಾರರು ಸ್ಥಳ ಪರಿಶೀಲನೆ ಮಾಡಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಲು ಕೋರಿ, ದೂರುದಾರರು ತನ್ನ ತಂದೆಯೊಂದಿಗೆ ಎರಡು ಬಾರಿ

ಎದುರುದಾರರನ್ನು ಭೇಟಿ ಮಾಡಿರುತ್ತಾರೆ. ದಿನಾಂಕ: 25-4-2015 ರಂದು ದೂರುದಾರರು ಎದುರುದಾರರನ್ನು ಭೇಟಿ ಮಾಡಿದಾಗ, ಎದುರುದಾರರು ಸ್ಥಳ ಪರಿಶೀಲನೆಗೆ ಬಂದಿದ್ದಾಗ, 5000/- ರೂ ಹಣಕ್ಕೆ ಬೇಡಿಕೆ ಇಟ್ಟಿದ್ದು, ದೂರುದಾರರು ಅದನ್ನು ನಿರಾಕರಿಸಿದಾಗ ಕನಿಷ್ಟ 3000/- ರೂ ಗಳನ್ನಾದರು ಲಂಚದ ಹಣ ನೀಡುವಂತೆ ಎದುರುದಾರರು ಒತ್ತಾಯಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್ ನಲ್ಲಿ ದಾಖಲುಮಾಡಿಕೊಂಡು, ಸಿ.ಡಿ.ಗೆ ಡೌನ್ ಲೋಡ್ ಮಾಡಿಸಿಕೊಂಡಿರುತ್ತಾರೆ. ದೂರುದಾರರು ಎದುರುದಾರರಿಗೆ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ ದೂರುದಾರರು ದಿನಾಂಕ: 27-4-2017 ರಂದು ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ಮಂಡ್ಯ, ಇವರಿಗೆ ದೂರು ನೀಡಿರುತ್ತಾರೆ. ಈ ಸಂಬಂಧವಾಗಿ ಮೊ.ಸಂಖ್ಯೆ: 03/2017 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7ರ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

3. ದಿನಾಂಕ: 27-4-2017 ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ಎಸ್.ಕುಮಾರ್ ಪಂಚ-1, ಶ್ರೀ ಕೆ.ವಿ.ಶ್ರೀನಿವಾಸ್ ಪಂಚ-2, ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 3,000/- (ಹಣದ ಡಿನಾಮಿನೇಷನ್ 500/- x 6) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇದ್ದ ಸಂಭಾಷಣೆ ಇದ್ದ ಸಿಡಿಯನ್ನು ಹಾಜರುಪಡಿಸಿರುತ್ತಾರೆ. ಪಂಚ-1 ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಅದನ್ನು ಪಂಚ-2 ಹಾಳೆಯಲ್ಲಿ ದಾಖಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಪಂಚ-1 ರವರು, ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ 3,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರ ಪ್ಯಾಂಟಿನ ಬಲಬಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಬಲಗೈಯಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯು ದೂರುದಾರರಿಗೆ ವಾಯ್ಸ್ ರೆಕಾರ್ಡ್ ಕೊಟ್ಟು ಉಪಯೋಗಿಸುವ ವಿಧಾನವನ್ನು ತಿಳಿಸಿಕೊಟ್ಟಿರುತ್ತಾರೆ ಮತ್ತು ಪಂಚ-2 ಶ್ರೀ ಶ್ರೀನಿವಾಸ್ ಇವರು ದೂರುದಾರರ ಜೊತೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ದಿನಾಂಕ: 27-4-2017 ರಂದು ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮ 11.00 ರಿಂದ ಮಧ್ಯಾಹ್ನ 1.00 ಘಂಟೆಯವರೆಗೆ ಬರೆದಿರುತ್ತಾರೆ.

4. ಅದೇ ದಿನ ಅಂದರೆ, ದಿನಾಂಕ: 27-4-2017 ರಂದು ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ತನಿಖಾಧಿಕಾರಿಯು ದೂರುದಾರರನ್ನು, ಪಂಚರನ್ನು ಮತ್ತು ಸಿಬ್ಬಂದಿಯನ್ನು ಕರೆದುಕೊಂಡು, ಎದುರುದಾರರ ಕಛೇರಿಯ ಹತ್ತಿರ ಮದ್ಯಾಹ್ನ 1.30 ಕ್ಕೆ ಬಂದಿರುತ್ತಾರೆ. ನಂತರ ದೂರುದಾರರು ಪಂಚ-2 ರವರ ಜೊತೆ ಹೋಗಿ ನೋಡಲಾಗಿ, ಎದುರುದಾರರು

ಕಾರ್ಯನಿಮಿತ್ತ ಬೆಂಗಳೂರಿಗೆ ಹೋಗಿರುವುದಾಗಿ ಕಛೇರಿಯ ಸಿಬ್ಬಂದಿಯವರು ತಿಳಿಸಿರುತ್ತಾರೆ. ಸದರಿ ವಿಚಾರವನ್ನು ದೂರುದಾರರು ತನಿಖಾಧಿಕಾರಿಗೆ ತಿಳಿಸಿದಾಗ, ತನಿಖಾಧಿಕಾರಿಯು ದಾಳಿಯನ್ನು ದಿನಾಂಕ: 02-05-2017ಕ್ಕೆ ಮುಂದೂಡಿ, ಠಾಣೆಗೆ ವಾಪಸ್ಸು ಬಂದು, ಆ ಸಂಬಂಧವಾಗಿ ಟ್ರಾಪ್ ಫಲಕಾರಿಯಾಗದ ಮಹಜರನ್ನು ಠಾಣೆಯಲ್ಲಿ 2.15 ರಿಂದ 3.15 ಗಂಟೆಯವರೆಗೆ ಬರೆದಿರುತ್ತಾರೆ.

5. ದಿನಾಂಕ: 02-05-2017 ರಂದು ತನಿಖಾಧಿಕಾರಿಯವರು ದೂರುದಾರರನ್ನು ಪಂಚರನ್ನು ಮತ್ತು ಸಿಬ್ಬಂದಿಯನ್ನು ಬರಮಾಡಿಕೊಂಡು, ದಿನಾಂಕ: 27-4-2017ರ ವಹಿಸುವಿಕೆಯ ಪಂಚನಾಮೆಯ ಅಂಶವನ್ನು ಪುನರ್ ಮನನ ಮಾಡಿಸಿರುತ್ತಾರೆ. ನಂತರ ತನಿಖಾಧಿಕಾರಿಯು ತಂಡದೊಂದಿಗೆ ಬೆಳಿಗ್ಗೆ 11.15ಕ್ಕೆ ಎದುರುದಾರರ ಕಛೇರಿ ಹತ್ತಿರ ಬಂದಿರುತ್ತಾರೆ. ದೂರುದಾರರು ಪಂಚ-2 ಶ್ರೀನಿವಾಸ ರೊಂದಿಗೆ ಎದುರುದಾರರ ಕಛೇರಿಗೆ ಹೋಗಿ ಎದುರುದಾರರನ್ನು ಭೇಟಿ ಮಾಡಿದಾಗ, ಎದುರುದಾರರು ಮತ್ತೊಮ್ಮೆ ಸ್ಥಳ ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲಾಗುವುದೆಂದು ದೂರುದಾರರಿಗೆ ನೋಟೀಸನ್ನು ಕೊಟ್ಟಿರುತ್ತಾರೆ. ಸದರಿ ನೊಟೀಸನೊಂದಿಗೆ ದೂರುದಾರರು ತನಿಖಾಧಿಕಾರಿಯ ಹತ್ತಿರ ಬಂದು ತಿಳಿಸಿದಾಗ, ತನಿಖಾಧಿಕಾರಿಯು ದಾಳಿಯನ್ನು ಮುಂದೂಡಿ, ಠಾಣೆಗೆ ವಾಪಸ್ಸು ಬಂದು ಟ್ರಾಪ್ ಫಲಕಾರಿಯಾಗದ ಮಹಜರನ್ನು ಮ: 12.30 ರಿಂದ 1.30 ರವರೆಗೆ ಪಂಚರ ಸಮಕ್ಷಮ ಮುಂದೆ ಬರೆದಿರುತ್ತಾರೆ.

6. ನಂತರ, ದಿನಾಂಕ: 27-5-2017 ರಂದು ತನಿಖಾಧಿಕಾರಿಯವರು, ಪಂಚರನ್ನು ದೂರುದಾರರನ್ನು, ಮತ್ತು ಸಿಬ್ಬಂದಿಯನ್ನು ಬರಮಾಡಿಕೊಂಡು, ದಿನಾಂಕ: 27-4-2017 ರ ವಹಿಸುವಿಕೆಯ ಪಂಚನಾಮೆಯ ಅಂಶವನ್ನು ಪುನರ್ ಮನನ ಮಾಡಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯು ತಂಡದೊಂದಿಗೆ ಬೆಳಿಗ್ಗೆ 12.30ಕ್ಕೆ ಎದುರುದಾರರ ಕಛೇರಿ ಹತ್ತಿರ ಬಂದಿರುತ್ತಾರೆ. ದೂರುದಾರರು ನೆರಳು ಸಾಕ್ಷಿ ಶ್ರೀನಿವಾಸ ರೊಂದಿಗೆ ಎದುರುದಾರರ ಕಛೇರಿಗೆ ಹೋಗಿ, ಎದುರುದಾರರನ್ನು ಭೇಟಿ ಮಾಡಿದಾಗ, ಎದುರುದಾರರು ದೂರುದಾರರನ್ನು ಕುರಿತು ನೋಟೀಸ್ ಜಾರಿ ಮಾಡಿದ ನಂತರ ವಿಳಂಬವಾಗಿ ದಾಖಲಾತಿಗಳನ್ನು ಸಲ್ಲಿಸಲು ಬಂದಿರುತ್ತೀರಿ ಹಾಗೂ ನೀವು ವಿಳಂಬವಾಗಿ ಬಂದಿರುವುದರಿಂದ, ನಿಮ್ಮ ಜಮೀನಿನ ಭೂಪರಿವರ್ತನೆ ಕೆಲಸಕ್ಕೆ ಸಂಬಂಧಿಸಿದಂತೆ ವರದಿಯನ್ನು ಡಿ.ಸಿ.ಯವರಿಗೆ ಸಲ್ಲಿಸಲಾಗಿರುತ್ತದೆ, ವರದಿ ಬಂದ ನಂತರ ನಿಮಗೆ ಪೋನ್ ಮಾಡಿ ತಿಳಿಸಲಾಗುತ್ತದೆ ಎಂದು ಹೇಳಿರುತ್ತಾರೆ. ನಂತರ ದೂರುದಾರರು ತನಿಖಾದಿಕಾರಿಯವರ ಬಳಿ ಬಂದು ಸದರಿ ವಿಚಾರವನ್ನು ತಿಳಿಸಿದಾಗ, ತನಿಖಾಧಿಕಾರಿಯು ದಾಳಿಯನ್ನು ಮುಂದೂಡಿ, ಠಾಣೆಗೆ ವಾಪಸ್ಸು ಬಂದು ಟ್ರ್ಯಾಪ್ ಫಲಕಾರಿಯಾಗದ ಮಹಜರನ್ನು 02.00 ರಿಂದ 3.00 ರವರೆಗೆ ಪಂಚರ ಸಮಕ್ಷಮರ ಮುಂದೆ ಬರೆದಿರುತ್ತಾರೆ.

7. ನಂತರ, ದಿನಾಂಕ: 03-2-2018 ರಂದು ತನಿಖಾಧಿಕಾರಿಯವರು ಪಂಚರು ದೂರುದಾರರು, ಮತ್ತು ಸಿಬ್ಬಂದಿಯನ್ನು ಬರಮಾಡಿಕೊಂಡು, ದಿನಾಂಕ: 27-4-2017 ರ ವಹಿಸುವಿಕೆಯ ಪಂಚನಾಮೆಯ ಅಂಶವನ್ನು ಪುನರ್ ಮನನ ಮಾಡಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯು ತಂಡದೊಂದಿಗೆ ಬೆಳಿಗ್ಗೆ 12.20ಕ್ಕೆ ಎದುರುದಾರರ ಕಛೇರಿ ಹತ್ತಿರ ಬಂದಿರುತ್ತಾರೆ. ದೂರುದಾರರು ನೆರಳು ಸಾಕ್ಷಿ ಶ್ರೀನಿವಾಸ ರೊಂದಿಗೆ ಎದುರುದಾರರ ಕಛೇರಿಗೆ ಹೋಗಿ, ಎದುರುದಾರರನ್ನು ಭೇಟಿ ಮಾಡಿದಾಗ, ಎದುರುದಾರರು ದೂರುದಾರರನ್ನು ಕುರಿತು **"ನಿಮಗೆ ನೀಡಿರುವ ದಿನಾಂಕ: 6-9-2017ರ ಪತ್ರದಲ್ಲಿ 7 ದಿವಸದ ಒಳಗಾಗಿ ದಿನಾಂಕ: 27-4-2017ರ ಈ ಕಛೇರಿ ಪತ್ರದಲ್ಲಿ ಸೂಚಿಸಿರುವ ದಾಖಲಾತಿಯೊಂದಿಗೆ ಸ್ಥಳ ಪರಿಶೀಲನೆಗೆ ಅನುವು ಮಾಡಿಕೊಡಲು ಮತ್ತೊಮ್ಮೆ ಸೂಚಿಸಿದ್ದು, ನೀವು ದಾಖಲಾತಿಗಳನ್ನು ರೆಡಿ ಮಾಡಿಕೊಂಡಲ್ಲಿ, ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ"**. ನಂತರ ದೂರುದಾರರು ತನಿಖಾದಿಕಾರಿಯವರ ಬಳಿ ಬಂದು, ಸದರಿ ವಿಚಾರವನ್ನು ತಿಳಿಸಿದಾಗ, ತನಿಖಾಧಿಕಾರಿಯು ದಾಳಿಯನ್ನು ಮುಂದೂಡಿ, ಠಾಣೆಗೆ ವಾಪಸ್ಸು ಬಂದು ಟ್ರ್ಯಾಪ್ ಫಲಕಾರಿಯಾಗದ ಮಹಜರನ್ನು 1.15 ರಿಂದ 2.15 ರವರೆಗೆ ಪಂಚರ ಸಮಕ್ಷಮರ ಮುಂದೆ ಬರೆದಿರುತ್ತಾರೆ.

8. ದಿನಾಂಕ: 28-5-2018 ರಂದು ತನಿಖಾಧಿಕಾರಿಯವರು ಪಂಚರನ್ನು ದೂರುದಾರರನ್ನು, ಮತ್ತು ಸಿಬ್ಬಂದಿಯನ್ನು ಬರಮಾಡಿಕೊಂಡು, ದಿನಾಂಕ: 27-4-2017 ರ ವಹಿಸುವಿಕೆಯ ಪಂಚನಾಮೆಯ ಅಂಶವನ್ನು ಪುನರ್ ಮನನ ಮಾಡಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯು ತಂಡದೊಂದಿಗೆ ಬೆಳಿಗ್ಗೆ 11.40ಕ್ಕೆ ಎದುರುದಾರರ ಕಛೇರಿ ಹತ್ತಿರ ಬಂದಿರುತ್ತಾರೆ. ನಂತರ, ದೂರುದಾರರು ಪಂಚ-2 ಶ್ರೀನಿವಾಸ ಇವರ ಜೊತೆಯೊಂದಿಗೆ ಎದುರುದಾರರ ಕಛೇರಿಗೆ ಹೋಗಿ, ಎದುರುದಾರರನ್ನು ಭೇಟಿ ಮಾಡಿದಾಗ, ಎದುರುದಾರರು ದೂರುದಾರರನ್ನು ಕುರಿತು **"ನೀವು ನಿಗದಿತ ಅವದಿಯಲ್ಲಿ ಯಾವುದೇ ದಾಖಲೆಗಳನ್ನು ಹಾಜರುಪಡಿಸದ ಕಾರಣ ನಿಮ್ಮ ಅರ್ಜಿಯನ್ನು ಮುಕ್ತಾಯ ಮಾಡಿರುವುದಾಗಿ ತಿಳಿಸಿರುತ್ತಾರೆ. ನಂತರ ದೂರುದಾರರಿಂದ ಲಂಚದ ಹಣವನ್ನು ಪಡೆಯದೆ ನಿಮ್ಮ ಅರ್ಜಿ ಮುಕ್ತಾಯವಾಗಿರುತ್ತದೆ ಬರಬೇಡಿ ಹೋಗಿ ಎಂದು ಹೇಳಿರುತ್ತಾರೆ"**. ನಂತರ ದೂರುದಾರರು ತನಿಖಾದಿಕಾರಿಯವರ ಬಳಿ ಬಂದು ಸದರಿ ವಿಚಾರವನ್ನು ತಿಳಿಸಿದಾಗ, ತನಿಖಾಧಿಕಾರಿಯು ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಪಡೆದುಕೊಳ್ಳದೆ ಇರುವುದರಿಂದ, ಹಾಗೂ ಇನ್ನೂ ಮುಂದೆ, ಎದುರುದಾರರು ಲಂಚದ ಹಣವನ್ನು ಪಡೆದು ಟ್ರ್ಯಾಪ್ ಆಗುವ ಸಾದ್ಯತೆ ಇಲ್ಲವೆಂದು ಪಂಚರಿಗೆ ತಿಳಿಸಿ, ದೂರುದಾರರಿಂದ ಲಂಚದ ಹಣವನ್ನು ವಾಪಸ್ಸು ಪಡೆದುಕೊಂಡು ಕವರ್‌ನಲ್ಲಿ ಭದ್ರಪಡಿಸಿ, ದಾಳಿಯನ್ನು ಮುಕ್ತಾಯಗೊಳಿಸಿ, ಈ ಸಂಬಂಧವಾಗಿ ಮ: 12.30 ರಿಂದ 1.30 ರವರೆಗೆ ಪಂಚರ ಸಮಕ್ಷಮರ ಪಂಚನಾಮೆ ಬರೆದಿರುತ್ತಾರೆ.

9. ತನಿಖಾಧಿಕಾರಿಯವರು ದಿನಾಂಕ: 28-05-2018 ರಂದು ಎದುರುದಾರರಿಗೆ ನೋಟೀಸನ್ನು ಹೊರಡಿಸಿ ಸದರಿ ಪ್ರಕರಣದ ತನಿಖೆಗೆ ದಿನಾಂಕ: 28-05-2018 ರಂದು ಹಾಜರಾಗುವಂತೆ ತಿಳಿಸಿರುತ್ತಾರೆ. ಸದರಿ ನೋಟೀಸ್ ದಿನಾಂಕ: 28-05-2018 ರಂದು ಜಾರಿಯಾಗಿರುತ್ತದೆ ಹಾಗೂ ಅದೇ ದಿನ ಎದುರುದಾರರು ತನಿಖಾಧಿಕಾರಿಯವರ ಮುಂದೆ ಹಾಜರಾಗಿ, ತನ್ನ ಮಾದರಿ ಧ್ವನಿಯನ್ನು ನೀಡಿರುತ್ತಾರೆ. ದಿನಾಂಕ: 28-05-2018 ರಂದು ತನಿಖಾಧಿಕಾರಿಯವರು ಎದುರುದಾರರ ಮೇಲಾಧಿಕಾರಿಯರಾದ ಆರ್. ಶೇಷ, ಸಹಾಯಕ ನಿರ್ದೇಶಕರು, ಮೈಸೂರು ಜಿಲ್ಲೆ ಮತ್ತು ಜಂಟಿ ನಿರ್ದೇಶಕರು (ಪ್ರಭಾರ) ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ, ವಿಭಾಗೀಯ ಕಛೇರಿ, ಮೈಸೂರು ಇವರನ್ನು ಬರಮಾಡಿಕೊಂಡು ಲಂಚದ ಬೇಡಿಕೆ ಇದ್ದ ಸಿಡಿಯನ್ನು ಲ್ಯಾಪ್ ಟ್ಯಾಪ್ ಗೆ ಹಾಕಿ ಕೇಳಿಸಿದಾಗ, ಆರ್. ಶೇಷ ರವರು ಸದರಿ ಸಿಡಿಯ ಸಂಭಾಷಣೆಯನ್ನು ಕೇಳಿ ಎದುರುದಾರರ ಧ್ವನಿಯನ್ನು ಗುರುತಿಸಿ ದೃಢೀಕರಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ದಿ: 28/05/2018 ರಂದು ಎದುರುದಾರರ ಸಮಕ್ಷಮ ಸಿ.ಡಿ. ಅಮಾನತ್ತು ಪಂಚನಾಮೆಯನ್ನು ಮ: 3.00 ಗಂಟೆಯಿಂದ 5.30 ರವರೆಗೆ ಬರೆದಿರುತ್ತಾರೆ.

10. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಇರುವುದಾಗಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಿಕರಿಸಲ್ಪಟ್ಟಿದೆ.

11. ಎದುರುದಾರರಿಗೆ ದಿ: 07/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 12/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯ ಕಂಡಿಕೆ 1 ಮತ್ತು 2 ರಲ್ಲಿ ತನ್ನ ವಿರುದ್ಧ ಪರಿಶೀಲನಾ ಟಿಪ್ಪಣಿಯಲ್ಲಿ ಮಾಡಿರುವ ಆರೋಪಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ದೂರುದಾರರು ತನ್ನ ವಿರುದ್ಧ ಎಸಿಬಿ, ಮಂಡ್ಯ ಇವರ ಮುಂದೆ ದಾಖಲಿಸಿರುವ ದೂರು ಸುಳ್ಳಾಗಿರುತ್ತದೆ. ವಿವರಣೆ ಕಂಡಿಕೆ 3 ರಲ್ಲಿ ದೂರುದಾರರ ತಂದೆ ತನ್ನ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ದಾಖಲಿಸಿರುವುದಿಲ್ಲ. ಆದರೆ ದೂರುದಾರರು ಜಿಲ್ಲಾಧಿಕಾರಿಗಳ ಮುಂದೆ ಸಲ್ಲಿಸಿದ ಅರ್ಜಿಯು ತನ್ನ ಕಛೇರಿಗೆ ದಿ: 02/7/2016 ರಂದು ಬಂದ ನಂತರ, ಸದರಿ ಅರ್ಜಿಯನ್ನು ತಾನು ಜಂಟಿ ನಿರ್ದೇಶಕರು, ಮೈಸೂರು, ಇವರಿಗೆ ಕಳುಹಿಸಿದ್ದು, ಸದರಿಯವರು ದೂರುದಾರರ ತಂದೆ ಶ್ರೀ ಪರಶಿವಮೂರ್ತಿ, ದಿ: 11/7/2016 ರಂದು ದಾಖಲೆಗಳನ್ನು ಸಲ್ಲಿಸುವಂತೆ ಪತ್ರ ಬರೆದಿದ್ದರೂ ಸಹ ದಾಖಲೆಗಳನ್ನು ಸಕಾಲದಲ್ಲಿ ಸಲ್ಲಿಸಿರುವುದಿಲ್ಲ, ಆದ ಪ್ರಯುಕ್ತ ಸದರಿ ಅರ್ಜಿಯು ವಜಾ ಆಗಿರುತ್ತದೆ. ನಂತರ, 5 ತಿಂಗಳು ಕಳೆದ ಮೇಲೆ ದೂರುದಾರರು ದಿ: 29/12/2016 ರಂದು ಮತ್ತೊಂದು ಅರ್ಜಿಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸಿದ್ದು, ಪುನ: ಸದರಿ ಅರ್ಜಿ ದಿ: 15/3/2017 ರಂದು ತನ್ನ ಕಛೇರಿಗೆ ಪುನರ್

ಪರಿಶೀಲಿಸಲು ಬಂದಿರುತ್ತದೆ. ತದನಂತರ, ತಾನು ದೂರುದಾರರಿಗೆ ಸೂಕ್ತ ದಾಖಲೆಗಳನ್ನು ಸಲ್ಲಿಸಲು ದಿ: 15/4/2017 ರಂದು ಪತ್ರವನ್ನು ಬರೆದಿದ್ದರೂ ಸಹ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನಂತರ, ತಾನು ಜಿಲ್ಲಾಧಿಕಾರಿಗೆ ದಿ: 08/5/2017 ರಂದು ತನ್ನ ಅಭಿಪ್ರಾಯವನ್ನು ಸಲ್ಲಿಸಿ, ಸೂಕ್ತ ದಾಖಲೆಗಳು ಇಲ್ಲದ ಪ್ರಯುಕ್ತ ಅನುಮತಿಯನ್ನು ನಿರಾಕರಿಸಲಾಗಿದೆ ಎಂದು ತಿಳಿಸಿರುತ್ತೇನೆ. ಆ ಕಾರಣಕ್ಕಾಗಿ ದೂರುದಾರರು ಅವರ ತಂದೆ ತನ್ನ ವಿರುದ್ಧ ವೈರತ್ವವನ್ನು ಹೊಂದಿರುತ್ತಾರೆ ಮತ್ತೆ ದೂರುದಾರರು ರಾಜಕೀಯ ಶಿಫಾರಸ್ಸಿನ ಮೇರೆಗೆ ಜಿಲ್ಲಾಧಿಕಾರಿಗೆ ಮತ್ತೊಂದು ಅರ್ಜಿಯನ್ನು ದಾಖಲಿಸಿ, ಸದರಿ ಅರ್ಜಿ ತನ್ನ ಕಛೇರಿಗೆ ದಿ: 29/5/2017 ರಂದು ಪುನರ್ ಪರಿಶೀಲನೆ ಮಾಡಲು ಕಳುಹಿಸಿರುತ್ತಾರೆ. ತದನಂತರ ತಾನು ಸೂಕ್ತ ದಾಖಲೆಗಳನ್ನು ಸಲ್ಲಿಸುವಂತೆ ಮತ್ತೊಂದು ಪತ್ರವನ್ನು ದೂರುದಾರರಿಗೆ ಬರೆದಿದ್ದರೂ ಸಹ ಯಾವುದೇ ದಾಖಲೆಗಳನ್ನು ಸಲ್ಲಿಸದಿರುವ ಪ್ರಯುಕ್ತ ದೂರುದಾರರ ಅರ್ಜಿಯ ಮೇಲೆ ನನ್ನ ಅಂತಿಮ ಅಭಿಪ್ರಾಯವನ್ನು ಜಿಲ್ಲಾಧಿಕಾರಿಯವರಿಗೆ ದಿ: 4/10/2017 ರಂದು ಸಲ್ಲಿಸಿರುತ್ತೇನೆಂದು ಹೇಳಿರುತ್ತಾರೆ. ನಂತರ ಎದುರುದಾರರು 4ನೇ ಕಂಡಿಕೆಯಲ್ಲಿ ತಾನು ಯಾವುದೇ ಲಂಚಕ್ಕೆ ಒತ್ತಾಯ ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ. ಕಂಡಿಕೆ 5 ರಲ್ಲಿ ದೂರುದಾರರ ಜೊತೆ ತನ್ನ ಕರ್ತವ್ಯಕ್ಕೆ ಸಂಬಂಧಿಸಿದಂತೆ, ಯಾವುದೇ ಸಂಭಾಷಣೆಯನ್ನು ಮಾಡಿರುವುದಿಲ್ಲ ಹಾಗೂ ದೂರುದಾರರು ದಾಖಲು ಮಾಡಿಕೊಂಡಿರುವ ಧ್ವನಿ ಸಂಭಾಷಣೆ ಅಲ್ಲಗಳೆದಿರುತ್ತಾರೆ. ಕಂಡಿಕೆ 6 ರಲ್ಲಿ ಪರಿವೀಕ್ಷಣೆ ಟಿಪ್ಪಣಿಯಲ್ಲಿ ಉಲ್ಲೇಖಿಸಲಾದ ಲಂಚದ ಹಣಕ್ಕೆ ಸಂಬಂಧಪಟ್ಟ ಸಂಭಾಷಣೆ ಅಲ್ಲಗಳೆದಿದ್ದು, ತಾನು ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲ. ಕಂಡಿಕೆ 7ರಲ್ಲಿ ವಹಿಸುವಿಕೆ ಪಂಚನಾಮೆಯಲ್ಲಿ ಮಾಡಿರುವ ಪ್ರಕ್ರಿಯೆಗಳು ಕಾನೂನು ಸಮಪರ್ಕವಾಗಿರುವುದಿಲ್ಲ ಕೇವಲ ದೂರು ದಾಖಲಿಸಲು ಮಾತ್ರ ದೂರುದಾರರು ಮತ್ತು ಎಸಿಬಿಯವರು ತಯಾರು ಮಾಡಿರುತ್ತಾರೆ. ಕಂಡಿಕೆ 8 ರಲ್ಲಿ ದಿ: 27/4/2017 ರಂದು ತಾನು ಕೆಲಸದ ನಿಮಿತ, ಬೆಂಗಳೂರಿಗೆ ಬಂದಿದ್ದು ಆ ದಿನ ಎಸಿಬಿಯವರು ಪಂಚರ ಸಮಕ್ಷಮ ಟ್ರ್ಯಾಪ್ ಮಾಡಲು ಬಂದಿರುವ ವಿಚಾರ ತನಗೆ ತಿಳಿದಿರುವುದಿಲ್ಲ. ಕಂಡಿಕೆ 9 ರಲ್ಲಿ ದೂರುದಾರರು ದಿ: 2/5/2017 ರಂದು ತನ್ನ ಅರ್ಜಿ ಬಗ್ಗೆ ವಿಚಾರಿಸಿದ್ದು ಒಪ್ಪಿಕೊಂಡಿರುತ್ತಾರೆ. ಆದರೆ ವಹಿಸುವಿಕೆ ಪಂಚನಾಮೆ ಮತ್ತು ಇತರೆ ಪಂಚನಾಮೆಗಳನ್ನು ಅಲ್ಲಗಳೆದಿರುತ್ತಾರೆ. ಕಂಡಿಕೆ 10 ರಲ್ಲಿ ದೂರುದಾರರು ದಿ: 27/5/2017 ರಂದು ತನ್ನ ಕಛೇರಿಗೆ ಬಂದು, ತನ್ನ ಅರ್ಜಿಯ ಬಗ್ಗೆ ವಿಚಾರಿಸಿದ ಅಂಶವನ್ನು ಒಪ್ಪಿಕೊಳ್ಳುತ್ತಾರೆ. ಆ ಸಮಯದಲ್ಲಿ ಸೂಕ್ತ ದಾಖಲೆಗಳನ್ನು ಸಲ್ಲಿಸದಿದ್ದ ಬಗ್ಗೆ ತಿಳಿಸಿ, ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ ಬಗ್ಗೆ, ದೂರುದಾರರಿಗೆ ತಿಳಿಸಿದ್ದೇನೆಂದು ಹೇಳುತ್ತಾರೆ. ನಂತರ, ಮಾಡಲಾದ ವಹಿಸುವಿಕೆ ಪಂಚನಾಮೆಯ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ನಂತರ ಕಂಡಿಕೆ 11 ರಲ್ಲಿ ದೂರುದಾರರು ದಿ: 3/2/2018 ರಂದು ತನನ್ನು ಭೇಟಿ ಮಾಡಿ ವರದಿ ಬಗ್ಗೆ ವಿಚಾರಿಸಿರುತ್ತಾರೆ. ಆಗ ತಾನು ಅವರ ಅರ್ಜಿಯನ್ನು ಇತ್ಯರ್ಥಗೊಳಿಸಿರುವ ಬಗ್ಗೆ ದೂರುದಾರರಿಗೆ ತಿಳಿಸಿರುತ್ತೇನೆಂದು ಹೇಳಿರುತ್ತಾರೆ. ಕಂಡಿಕೆ 12 ರಲ್ಲಿ ದೂರುದಾರರು ದಿ: 28/5/2018 ರಂದು ತನ್ನನ್ನು ಭೇಟಿ ಮಾಡಿ, ಅರ್ಜಿಯ ಬಗ್ಗೆ ವಿಚಾರಿಸಿದ ಅಂಶವನ್ನು ಒಪ್ಪಿಕೊಳ್ಳುತ್ತಾರೆ. ಆಗ ತಾನು ದೂರುದಾರ ಅರ್ಜಿಯನ್ನು ಸೂಕ್ತ

ದಾಖಲೆಗಳ ಅಲಭ್ಯತೆಯಿಂದ ವಜಾ ಮಾಡಿರುವುದಾಗಿ ದೂರುದಾರರಿಗೆ ತಿಳಿಸಿದ್ದೇನೆಂದು ಹೇಳಿರುತ್ತಾರೆ. ನಂತರದ ವಹಿಸುವಿಕೆ ಪಂಚನಾಮೆಯ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಕಂಡಿಕೆ 13ರಲ್ಲಿ ಪರಿವೀಕ್ಷಣೆ ಟಿಪ್ಪಣೆಯ VIII ರ ಅಂಶವನ್ನು ಒಪ್ಪಿಕೊಳ್ಳುತ್ತಾರೆ. ಆದರೆ, ವಾಸ್ತವಿಕ ಸಂಗತಿ ಇಲ್ಲದೆ ನೋಟಿಸನ್ನು ಜಾರಿ ಮಾಡಿರುತ್ತಾರೆ. ಕಂಡಿಕೆ 14 ರಲ್ಲಿ ಪರಿವೀಕ್ಷಣೆ ಟಿಪ್ಪಣಿಯ ಕಂಡಿಕೆ ix ಅಲ್ಲಗಳೆದಿರುತ್ತಾರೆ, ಹಾಗೂ ತನ್ನ ಮೇಲಾಧಿಕಾರಿ ತನ್ನ ಧ್ವನಿಯನ್ನು ದಿ: 28/5/2018 ರಂದು ಗುರುತಿಸಿದ ಅಂಶವನ್ನು ಅಲ್ಲಗಳೆದಿರುತ್ತಾರೆ. ಕಂಡಿಕೆ 15 ರಲ್ಲಿ ಪರಿವೀಕ್ಷಣೆ ಟಿಪ್ಪಣಿಯ ಕಂಡಿಕೆ x ರ ಅಂಶವನ್ನು ಅಲ್ಲಗಳೆದಿರುತ್ತಾರೆ. ಕಂಡಿಕೆ 16 ರಲ್ಲಿ ವಹಿಸುವಿಕೆ ಪಂಚನಾಮೆಯ ಪ್ರಕ್ರಿಯೆಗಳನ್ನು ಸಾರಸಗಟಾಗಿ ಅಲ್ಲಗಳೆದಿರುತ್ತಾರೆ. ಕಂಡಿಕೆ 17 ರಲ್ಲಿ ಎಸಿಬಿ ಅಧಿಕಾರಿಗಳು ತನ್ನ ವಿವರಣೆಯನ್ನು ಪರಿಗಣಿಸಲು ವಿಫಲರಾಗಿರುತ್ತಾರೆ. ಕಂಡಿಕೆ 18 ರಲ್ಲಿ ದೂರುದಾರರು ತನ್ನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತಾರೆ. ಎ.ಸಿ.ಬಿ.ಯವರು ಪ್ರಾಥಮಿಕ ತನಿಖೆ ಮಾಡದೆ ಎಫ್.ಐ.ಆರ್ ದಾಖಲಿಸಿರುವುದು ಕಾನೂನಿಗೆ ವ್ಯತಿರಿಕ್ತವಾಗಿರುತ್ತದೆ ಮತ್ತು ಕಂಡಿಕೆ 19 ರಲ್ಲಿ ಸೂಕ್ತ ಕಾರಣ ಮತ್ತು ಸಾಕ್ಷ್ಯ ಇಲ್ಲದೆ ತನ್ನ ವಿರುದ್ಧ ಪರಿವೀಕ್ಷಣಾ ಟಿಪ್ಪಣಿ ಮಾಡಿರುತ್ತದೆ. ಕಂಡಿಕೆ 20 ರಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 3ರ ಅಂಶವನ್ನು ಸಹ ಅಲ್ಲಗಳೆದಿರುತ್ತಾರೆ. ಅಂತಿಮವಾಗಿ ತನ್ನ ವಿರುದ್ಧ ಶಿಸ್ತಿನ ಕ್ರಮಕ್ಕಾಗಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವ ಆದೇಶವನ್ನು ಕೈಬಿಡಬೇಕೆಂದು ಕೇಳಿರುತ್ತಾರೆ. ಎದುರುದಾರರು ನೀಡಿರುವ ಮೇಲ್ಕಂಡ ಸಮಜಾಯಿಷಿಕೆಯನ್ನು ಪರಿಶೀಲಿಸಲಾಗಿ, ಎದುರುದಾರರು ಯಾವುದೇ ಸೂಕ್ತ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಈ ಹಂತದಲ್ಲಿ ಅವರ ಸಮಜಾಯಿಷಿಯನ್ನು ಪರಿಗಣಿಸಲು ಬರುವುದಿಲ್ಲ ಹಾಗೂ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ

ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

14. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

21/2/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು